**ಸಿ.ಸಿ.ನಂ.950/2019**

ಪಿ.ಡಬ್ಲ್ಯೂ: 1

ಸಿ.ಡಬ್ಲ್ಯೂ: 1

**ದಿನಾಂಕ:03-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ.**

ಅಕ್ಕಿ ವಿತರಣೆ ಮಾಡಿದ ನಂತರ ಖಾಲಿ ಚೀಲಗಳನ್ನು ನ್ಯಾಯಬೆಲೆ ಅಂಗಡಿಯವರೇ ಇಟ್ಟುಕೊಳ್ಳುತ್ತಾರೆಂದರೆ ಸರಿ. ಸದರಿ ಚೀಲಗಳನ್ನು ಮಾರ್ಕೆಟ್ ನಲ್ಲಿ ಮಾರಾಟ ಮಾಡುತ್ತಾರೆಂದರೆ ಸರಿ. ನಾನು ಘಟನೆ ನೆಡದ ಸ್ಥಳಕ್ಕೆ ಹೋದ ಸಮಯದಲ್ಲಿ ನಾನು ವಶಪಡಿಸಿಕೊಂಡ ಅಕ್ಕಿ, ತೊಗರಿಬೆಳೆ, ಸ್ಕೆಲ್ ನ್ನು ಬಿಟ್ಟರೇ ಬೇರೆ ತೋಟದ ಮನೆಯ ಶೆಡ್ಡಿನಲ್ಲಿ ಏನೂ ಕಂಡುಬಂದಿರುವುದಲ್ಲ. ಆರೋಪಿಯು ಬನಶಂಕರಿ ಟ್ರೇಡ್ರರ್ಸ ಎಂಬುವ ಅಕ್ಕಿ ಮಾರಾಟದ ಅಂಗಡಿ ಇಟ್ಟುಕೊಂಡು ಪರವಾನಗಿ ಪಡೆದುಕೊಂಡು ಅಕ್ಕಿ ಮಾರಾಟ ಮಾಡುತ್ತಿದ್ದರು ಎಂದರೆ ಅದು ನನಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ಟ್ರೇಡರ್ಸ ರವರು ಅಕ್ಕಿಯನ್ನು ಖರೀದಿ ಮಾಡಿದಾಗ ಅವರಿಗೆ ಖರೀದಿಗೆ ಕೊಟ್ಟವರು ಬಿಲ್ಲನ್ನು ನೀಡುತ್ತಾರೆಂದರೆ ಸರಿ. ಬಿಲ್ಲಿನಲ್ಲಿ ಟ್ರೇಡರ್ಸ ರವರ ಪರವಾನಗಿಯೂ ಇರುತ್ತದೆ ಎಂದರೆ ಸಾಕ್ಷಿಯು ನಾನು ಪರಿಶೀಲಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಆರೋಪಿಯು ದಿನಾಂಕ: 14-03-2017 ರಂದು ಭದ್ರಾವತಿಯ ಸುನಿಲ್ ಟ್ರೇಡರ್ಸ ರವರಿಂದ 3 ಸಾವಿರ ರೂಪಾಯಿ ಧರ ಉಳ್ಳ ಅಕ್ಕಿಯನ್ನು ಮಾರಾಟ ಮಾಡಲು ತಂದಿರುತ್ತಾರೆಂದರೆ ಸಾಕ್ಷಿ ನನಗೆ ಅದು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಆರೋಪಿಯು ತಂದಂತಹ ಅಕ್ಕಿಗೆ ಆರ್ ಎಂಸಿ ರವರು ಬಿಲ್ ಕೊಟ್ಟಿರುತ್ತಾರೆಂದರೆ ಸಾಕ್ಷಿ ಅದನ್ನು ನಾನು ಪರಿಶೀಲಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಭದ್ರಾವತಿಯವರು ಆರೋಪಿಯು ಹಣ ಪಾವತಿ ಮಾಡಿರುವ ಬಗ್ಗೆ ಮೂರು ಸಲ ಬಿಲ್ಲನ್ನು ನೀಡಿರುತ್ತಾರೆಂದರೆ ಸಾಕ್ಷಿ ನನಗೆ ಅದರ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನೀವು ಘಟನಾ ಸ್ಥಳಕ್ಕೆ ಹೋದ ಸಮಯಕ್ಕೆ ಆರೋಪಿಯನ್ನು ಕರೆಸಿ ವಿಚಾರಣೆ ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿರುವುದಿಲ್ಲ, ಆಗ ಸಂಜೆ ಸಮಯ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಯಾವುದೇ

ಪ್ರಕರಣದಲ್ಲಿನೀವು ಅಮಾನತ್ತು ಮಾಡಿಕೊಳ್ಳುವ ಮುಂಚೆ ಆರೋಪಿಯನ್ನು ಕರೆಸಿ ವಿಚಾರಣೆ ಮಾಡುವುದು ನಿಮ್ಮ ಕರ್ತವ್ಯ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಆರೋಪಿಯನ್ನು ಕರೆಸಿ ಸ್ಥಳದಲ್ಲಿ ವಿಚಾರಣೆ ಮಾಡಿ ನಂತರ ನೀವು ಅಮಾನತ್ತು ಮಾಡಿಕೊಳ್ಳಬೇಕಾಗುತ್ತದೆ ಎಂದರೆ ಸಾಕ್ಷಿಯು ನಾವು ವಿಚಾರಣೆ ಮಾಡಲು ಪೊಲೀಸರಿಗೆ ತಿಳಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಆರೋಪಿಯು ಭದ್ರಾವತಿಯಿಂದ ಅಕ್ಕಿಯನ್ನು ಮಾರಾಟ ಮಾಡಲು ತಂದು ಪ್ಲಾಸ್ಟಿಕ್ ಚೀಲದಲ್ಲಿ ಇಟ್ಟಿರುವಂತಹ ಅಕ್ಕಿ ಆಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಸ್ಥಳ ಮಹಜರ್ ಮತ್ತು ಪೊಲೀಸ್ ಠಾಣೆಯಲ್ಲಿ ನಡೆದ ಮಹಜರ್ ನ ಚಕ್ಕುಬಂದಿ ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ ಮಹಜರ್ ನಲ್ಲಿರುವ ಸಂಪೂರ್ಣ ಮಾಹಿತಿ ನಿಮಗೆ ತಿಳಿದಿದೆಯೇ ಎಂದರೆ ಸಾಕ್ಷಿ ಪೊಲೀಸರು ಓದಿ ಹೇಳಿರುತ್ತಾರೆ, ಈಗ ನನಗೆ ನೆನಪಿಲ್ಲ ಎಂದು ನುಡಿದಿರುತ್ತಾರೆ.

ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿಯು ನ್ಯಾಯಾ ಬೆಲೆ ಅಂಗಡಿಯ ಮತ್ತು ಅಂಗನವಾಡಿಯಲ್ಲಿ ಉಪಯೋಗಿಸುವ ಅಕ್ಕಿಯನ್ನು ಅವರ ತೋಟದ ಮನೆಯಲ್ಲಿ ಇಟ್ಟುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ನೀವು ಅಮಾನತ್ತು ಮಾಡಿಕೊಂಡಿರುವ ಅಕ್ಕಿಯು ಎ-1 ಬ್ರಾಂಡ್ ಎಂದು ಪ್ಲಾಸ್ಟಿಕ್ ಚೀಲದಲ್ಲಿ ಇದ್ದ ಅಕ್ಕಿ ಆಗಿರುತ್ತದೆ. ಅದು ಭದ್ರಾವತಿಯಿಂದ ಮಾರಾಟ ಮಾಡಲು ತರಿಸಿಕೊಂಡ ಅಕ್ಕಿ ಆಗಿದ್ದು, ನೀವು ಹೇಳಿದಂತೆ ಸರ್ಕಾರದ ಅಕ್ಕಿಯನ್ನು ಆರೋಪಿ ಮಾರಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ತಹಶೀಲ್ದಾರ್ ರವರು ಕರೆ ಮಾಡಿರುವುದಿಲ್ಲ, ನೀವು ಮತ್ತು ಪೊಲೀಸರು ಯಾವುದೇ ಸ್ದಳಕ್ಕೆ ಭೇಟಿ ನೀಡಿ ಯಾವುದೇ ಅಕ್ಕಿಯನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪನ್ನು ಮಾಡದೇ ಇದ್ದರೂ ಸಹ ಆರೋಪಿಯ ಮೇಲೆ ಸುಳ್ಳು ದೂರನ್ನು ನೀಡಿದ್ದೀರಾ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇರುವುದಿಲ್ಲ.

**(**ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**)**

ಓ. ಕೇ. ಸ. ಇ. ಎ. ಒ.

ಸಹಿ /-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**